ಇ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ: 81.90 ಕೋಟಿ ರೂ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ: 17.80 ಕೋಟಿ ರೂ.

**ಮೂಲ ಗಿರಿಜನ ಹಾಡಿಗಳ ಮನೆಗಳ ನಿರ್ಮಾಣ**

**54 (121): ಶ್ರೀ ಹೆಚ್. ಪಿ. ಮಂಜುನಾಥ್ (ಹುಣಸೂರು) :** ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಜಿಲ್ಲೆಯ ಹೆಚ್. ಡಿ. ಕೋಟೆ ತಾಲ್ಲೂಕು, ಪಿರಿಯಾಪಟ್ಟಣ, ನಂಜನಗೂಡು ಹಾಗೂ ಹುಣಸೂರು ತಾಲ್ಲೂಕುಗಳಲ್ಲಿ ವಾಸಿಸುತ್ತಿರುವ ಮೂಲನಿವಾಸಿ ಗಿರಿಜನರ ಕಾಲೋನಿ/ಹಾಡಿಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಅನುದಾನ ಮಂಜೂರಾತಿ ಯಾಗಿದ್ದರೂ, ಮನೆಗಳ ನಿರ್ಮಾಣ ಕಾಮಗಾರಿಯು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ಕಾಮಗಾರಿ ಕುಂಠಿತವಾಗಿರುವುದಕ್ಕೆ ಕಾರಣವೇನು;

ಇ) ಹಾಲಿ ಸರಿಯಾದ ಸೂರಿಲ್ಲದೆ, ಗುಡಿಸಿಲಿನಲ್ಲಿ ವಾಸಿಸುತ್ತಿರುವ ಎಷ್ಟೋ ಗಿರಿಜನ ಕುಟುಂಬಗಳ ಪರಿಸ್ಥಿತಿಯು ಶೋಚನೀಯವಾಗಿದ್ದು, ಮನೆಗಳ ತುರ್ತು ನಿರ್ಮಾಣ ಅವಶ್ಯಕವಾಗಿರುತ್ತದೆ ಹಾಗೂ ಕೇಂದ್ರ ಸರ್ಕಾರದಿಂದ ಮೂಲ ಗಿರಿಜನ ಹಾಡಿಗಳ ಅಭಿವೃದ್ಧಿಗಾಗಿ ಎರಡನೆ ಕಂತಿನ ಅನುದಾನ ಮಂಜೂರಾಗಬೇಕಾಗಿದ್ದು, ಹಾಲಿ ಮಂಜೂರಾಗಿರುವ ಅನುದಾನಕ್ಕೆ ಉಪಯುಕ್ತತೆಯ ದೃಢೀಕರಣ ಪತ್ರ ನೀಡದೆ ಇದ್ದಲ್ಲಿ, ಸದರಿ ಹಣವು ಮಂಜೂರಾಗದೆ ಇರುವ ಪರಿಸ್ಥಿತಿ ಉಂಟಾಗುವ ಸಂದರ್ಭ ವಿರುತ್ತದೆ, ಆದ್ದರಿಂದ ಸದರಿ ವಿಚಾರವಾಗಿ ಸರ್ಕಾರ ಏನು ಕ್ರಮ ಕೈಗೊಳ್ಳಲಾಗುವುದೆಂದು ವಿವರ ಒದಗಿಸುವುದು?

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):**

ಅ) ಹೌದು.

ಆ) ಮೂಲನಿವಾಸಿ ಜನಾಂಗವಾದ ಜೇನುಕುರುಬ ಹಾಗೂ ಕೊರಗ ಇವರಿಗೆ ಮನೆಗಳನ್ನು ನಿರ್ಮಿಸಲು ಘಟಕ ವೆಚ್ಚ ರೂ. 50.000.00 ಆಗಿತ್ತು. ಅಂತಹ ಮೊತ್ತದಲ್ಲಿ ಮೂಲನಿವಾಸಿಗಳು ವಾಸಿಸುವ ಗುಡ್ಡಗಾಡು ಪ್ರದೇಶದಲ್ಲಿ

ಸೂಕ್ತವಾದ ಮನೆಗಳನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲವೆಂದು, ಇದನ್ನು ರೂ. 1,000,00.00ಕ್ಕೆ ಹೆಚ್ಚಿಸಬೇಕೆಂದು ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದೊಂದಿಗೆ ಸಮಾಲೋಚಿಸಲಾಗಿದೆ. ಈಗ ಅವರು ಅಂತಹ ಮನೆಗಳ ಘಟಕ ವೆಚ್ಚವನ್ನು ರೂ. 50,000.00ದಿಂದ ರೂ. 1,000,000ಕ್ಕೆ ಹೆಚ್ಚಿಸಲು ಸಹಮತಿ ನೀಡಿ, ಕೇಂದ್ರ ಸರ್ಕಾರದಿಂದ 75% ಅನುದಾನ ನೀಡಲು ಒಪ್ಪಿರುತ್ತಾರೆ. ಆ ಮೇರೆಗೆ ರಾಜ್ಯ ಸರ್ಕಾರ ಘಟಕ ವೆಚ್ಚವನ್ನು ರೂ.50,000.00 ದಿಂದ ರೂ.1,000,00.00ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. ರಾಜ್ಯ ಸರ್ಕಾರ 25% ಪ್ರಮಾಣದಲ್ಲಿ ವೆಚ್ಚ ಭರಿಸುತ್ತಿದೆ. ಅದರಂತೆ ಮನೆಗಳ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು.

ಇ) ಎರಡನೇ ಹಾಗೂ ಅಂತಿಮ ಕಂತಿನ ರೂ. 2320.25 ಲಕ್ಷಗಳ ಮೊತ್ತದ ಅನುದಾನವನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

**ಕುಣಿಗಲ್ ತಾಲ್ಲೂಕಿನ ಪಟ್ಟಣ ಮತ್ತು ಗ್ರಾಮಾಂತರದಲ್ಲಿ ಸಮುದಾಯ ಭವನ ನಿರ್ಮಾಣ**

**55 (385) ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್)** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಣಿಗಲ್ ತಾಲ್ಲೂಕಿನ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಪರಿಶಿಷ್ಟ ಜನಾಂಗದ ಕಾಲೋನಿಗಳಲ್ಲಿ ಸಮುದಾಯ ಭವನಗಳ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಪರಿಶಿಷ್ಟ ಜನಾಂಗ ವಾಸಿಸುತ್ತಿರುವ ಪ್ರದೇಶಗಳಲ್ಲಿ ಈ ಭವನಗಳನ್ನು ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಎ ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು):**

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

**56(392) ಶ್ರೀ ಪಾಟೀಲ್ ಎ. ಎಸ್.** (ನಡಹಳ್ಳಿ) (ದೇವರ ಹಿಪ್ಪರಗಿ): ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?